<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆಃ 1075/2024**

**ಸಾಕ್ಷಿಯನ್ನು ದಿಃ 23.02.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಲಕ್ಷ್ಮಣ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ರಾಮಯ್ಯ | | |
| ವಯಸ್ಸು | 63 ವರ್ಷ | | |
| ಕೆಲಸ | ಕೂಲಿ ಕೆಲಸ | | |
| ವಾಸಸ್ಥಳ | ಮಾರನಹಳ್ಳಿ | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ಚಾಸಾ-1 ನನ್ನ ಮಗಳು. ಚಾಸಾ-3 ನನ್ನ ಮಗ. ಚಾಸಾ-4 ನನ್ನ ಇನ್ನೊಬ್ಬ ಮಗಳು. ಚಾಸಾ-5 ಮತ್ತು 6 ನನ್ನ ಊರಿನ ಗ್ರಾಮಸ್ಥರು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. 1ನೇ ಆರೋಪಿ ನನ್ನ ಪತ್ನಿಯ ತಮ್ಮ. 1ನೇ ಆರೋಪಿಗೆ ನನ್ನ ಮಗಳಾದ ಚಾಸಾ-1 ರವರನ್ನು ಮದುವೆ ಮಾಡಿಕೊಟ್ಟೆ ಮದುವೆಯನ್ನು ನಾನೇ ಮಾಡಿದ್ದೇನೆ. ಮದುವೆಯ ಸಮಯದಲ್ಲಿ 10 ಗ್ರಾಂ ಚಿನ್ನ ಮತ್ತು ರೂ.50 ಸಾವಿರ ನಗದು ಹಣ ಕೊಟ್ಟೆವು. ನಾನು ಚಿನ್ನ ಮತ್ತು ಹಣ ಕೊಡುವಾಗ 1ನೇ ಆರೋಪಿಯ ಅಣ್ಣನಾದ ಕುಮಾರ ಮತ್ತು 1ನೇ ಆರೋಪಿಯ ಅಕ್ಕನಾದ ಕಮಲಿ ಇದ್ದರು. ಮದುವೆಯಾದ ನಂತರ ಚಾಸಾ-1 ರವರು ಆರೋಪಿತರ ಊರಾದ ಉಯಿಗೌಡನಹಳ್ಳಿಯಲ್ಲಿ ವಾಸ ಮಾಡಲು ಪ್ರಾರಂಭಿಸಿದರು. ಮದುವೆಯಾದ ನಂತರ 5-6ರ ವರ್ಷ ಚೆನ್ನಾಗಿದ್ದರು. ನನ್ನ ತಮ್ಮ ತೀರಿಹೋದ. ಆಗ ಆರೋಪಿತರು ಚಾಸಾ-1 ರವರನ್ನು ನಮ್ಮ ಮನೆಗೆ ಕಳುಹಿಸಿಕೊಡಲಿಲ್ಲ. ಈ ಕಾರಣಕ್ಕಾಗಿ ಆರೋಪಿತರು ಚಾಸಾ-1 ರವರಿಗೆ ಹೊಡೆದು ಬಡಿಯಲು ಪ್ರಾರಂಭಿಸಿದರು. ನಂತರ 1ನೇ ಆರೋಪಿ ನನ್ನ ಮಗಳನ್ನು ನಮ್ಮ ಮನೆಗೆ ತಂದು ಬಿಟ್ಟರು. ಈ ಬಗ್ಗೆ ಪಂಚಾಯ್ತಿಯಾಗಿ ಕರೆದುಕೊಂಡು ಹೋದರು. ಪುನಃ ಅದೇ ರೀತಿ ಹಿಂಸೆ ಕೊಟ್ಟಾಗ ಮೈಸೂರು ಪೋಲೀಸ್ ಠಾಣೆಯಲ್ಲಿ 2 ಬಾರಿ ಪಂಚಾಯ್ತಿ ನಡೆಯಿತು. ಅಲ್ಲಿ ಪೋಲಿಸರು ಆರೋಪಿತರಿಗೆ ಬುದ್ದಿವಾದ ಹೇಳಿ ನಮ್ಮ

ಮಗಳನ್ನು 1ನೇ ಆರೋಪಿಯೊಂದಿಗೆ ಕಳುಹಿಸಿಕೊಟ್ಟರು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

1 ರಿಂದ 3ನೇ ಆರೋಪಿತರು ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಾ, ಇನ್ನು ಹೆಚ್ಚಿನ ವರದಕ್ಷಿಣೆ ತರುವಂತೆ ಬೇಡಿಕೆ ಇಟ್ಟು ಕಿರುಕುಳ ನೀಡಿದರು ಎಂದರೆ ಸರಿ. ಹಿಂಸೆ ಕಿರುಕುಳ ನೀಡುತ್ತಿದ್ದ ಬಗ್ಗೆ ಚಾಸಾ-1 ರವರು ನನಗೆ ತಿಳಿಸುತ್ತಿದ್ದರು ಎಂದರೆ ಸರಿ. ಆಗ ನಾನು ಚಾಸಾ-1 ರವರಿಗೆ ಅನುಸರಿಸಿಕೊಂಡು ಹೋಗುವಂತೆ ಬುದ್ದಿಮಾತು ಹೇಳಿದ್ದೆ ಎಂದರೆ ಸರಿ. ಆರೋಪಿತರು ಚಾಸಾ-1ರವರಿಗೆ ಕಿರಕುಳ ನೀಡುತ್ತಿದ್ದ ಸಂಬಂಧ ಚಾಸಾ-1 ರವರನ್ನುವಿಚಾರ ಮಾಡಿದಾಗ 1ನೇ ಆರೋಪಿ 4ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡು ಆಕೆಯಜೊತೆ ಓಡಾಡುತ್ತಿರುವುದು ನಮಗೆ ತಿಳಿದುಬಂತು ಎಂದರೆ ಸರಿ. ದಿಃ 04.03.2024 ರಂದು ಚಾಸಾ-1 ರವರು ಮಧ್ಯಾಹ್ನ ಗಂಡನ ಮನೆಗೆ ಹೋದಾಗ ಅಲ್ಲಿ 4ನೇ ಆರೋಪಿ ಇದ್ದುದ್ದನ್ನು ನೋಡಿ ಪ್ರಶ್ನೆ ಮಾಡಿದಾಗ ಆರೋಪಿತರು ಸೇರಿಕೊಂಡು ಚಾಸಾ-1 ರವರಿಗೆ ಬೈದು ಕೊಲೆ ಬೆದರಿಕೆ ಹಾಕಿ ಕೈಗಳಿಂದ ಹೊಡೆದರು ಎಂದರೆ ಸರಿ. ಮದುವೆಯ ಸಮಯದಲ್ಲಿ ವರದಕ್ಷಿಣೆಯಾಗಿ ತೆಗೆದುಕೊಂಡ ರೂ.50 ಸಾವಿರ ನಗದು ಹಣ ಮತ್ತು 10 ಗ್ರಾಂ ಚಿನ್ನವನ್ನು ಇದುವರೆಗೂ ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ PKR ವಕೀಲರಿಂದಃ**

ನಾನು ಪೋಲೀಸರ ಮುಂದೆ ಮೈಸೂರಿನಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಹೇಳಿಕೆ ಕೊಡಲು ಪೋಲಿಸರು ನಿಮಗೆ ನೋಟೀಸ್ ನೀಡಿದ್ದಾರೆಯೇ ಎಂದರೆ ಇಲ್ಲ. ದೂರು ಕೊಡಲು ಹೋದಾಗ ಹೇಳಿಕೆ ದಾಖಲಿಸಿದ್ದಾರೆ. ದೂರು ಕೊಟ್ಟ 2-3 ದಿನದ ನಂತರ ಹೇಳಿಕೆ ಕೊಟ್ಟಿದ್ದೇನೆ. ಸದರಿ ಹೇಳಿಕೆಯಲ್ಲಿ ಏನೇನು ಬರೆಯಲಾಗಿದೆ ಎಂದು ಖುದ್ದಾಗಿ ಗೊತ್ತಿದೆಯೇ ಎಂದರೆ ನಾನು ಅವಿದ್ಯಾವಂತನಾಗಿದ್ದೇನೆ. ನಾನು ಮುಖ್ಯ ವಿಚಾರಣೆಯಲ್ಲಿ

ಹೇಳಿರುವ ವಿಷಯಗಳನ್ನು ಇದೇ ಮೊದಲಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ. ನನ್ನ ತಮ್ಮ ತೀರಿಹೋಗಿ 5-6 ವರ್ಷವಾಯಿತು. ಯಾವ ವಿಚಾರಕ್ಕೆ ಗಲಾಟೆಯಾಯಿತು ಎಂದು ನನಗೆ ಖುದ್ದು ಗೊತ್ತಿಲ್ಲ ಎಂದರೆ ಸರಿ. ಮದುವೆಯಾದ ನಂತರ ಚಾಸಾ-1 ರವರು 5-6 ವರ್ಷ ಗಂಡನ ಮನೆಯಲ್ಲಿದ್ದರು. ಅದಾದ ನಂತರ ಚಾಸಾ-1 ರವರನ್ನು 1ನೇ ಆರೋಪಿ ನಮ್ಮಮನೆಯಲ್ಲಿ ತಂದು ಬಿಟ್ಟಿದ್ದರು. ಅಂದಿನಿಂದಲೂ ಇಲ್ಲಿಯವರೆಗೆ ಚಾಸಾ-1 ರವರು ನಮ್ಮ ಮನೆಯಲ್ಲಿಯೇ ವಾಸವಿದ್ದಾರೆ. ಆ 5 ವರ್ಷಗಳ ಅವಧಿಯಲ್ಲಿ ನಮ್ಮ ಮನೆಯಲ್ಲಿ ಮತ್ತು ಆರೋಪಿತರ ಮನೆಯಲ್ಲಿ ಏನೆಲ್ಲಾ ವ್ಯವಹಾರ ಆಗಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಇದೆ. ನಮ್ಮ ಊರಿನ ಯಜಮಾನರು ವೆಂಕಟೇಶ್. ಮದುವೆಯಾದ 4-5 ವರ್ಷಕ್ಕೆ ನಮ್ಮ ಊರಿನಲ್ಲಿ ಪಂಚಾಯ್ತಿ ನಡೆಯಿತು ಎಂದರೆ ಸರಿ. ಸದರಿ ಪಂಚಾಯಿತಿಗೆ ನಾನು, ಪಂಚಾಯ್ತಿದಾರರಾದ ವೆಂಕಟೇಶ್ ಸೇರಿದ್ದರು ಎಂದರೆ ಸರಿ. ಪಂಚಾಯ್ತಿದಾರರ ಸಮ್ಮುಖ ಚಾಸಾ-1 ರವರು ತಾನು 1ನೇ ಆರೋಪಿಯ ಮನೆಗೆ ಹೋಗುವುದಿಲ್ಲ, ಆತನೊಂದಿಗೆ ಬಾಳ್ವೆ ಮಾಡಲು ಇಷ್ಟ ಇಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಪಂಚಾಯ್ತಿದಾರರ ಸಮಕ್ಷಮ ಚಾಸಾ-1 ರವರು 1ನೇ ಆರೋಪಿ ಕಟ್ಟಿದ್ದ ತಾಳಿಯನ್ನು ಕಿತ್ತು ಕೊಟ್ಟರು ಎಂದರೆ ಸರಿಯಲ್ಲ. ಪಂಚಾಯ್ತಿದಾರರು ಚಾಸಾ-1 ರವರ ಬಳಿ ನೀನು 1ನೇ ಆರೋಪಿಯೆಂದಿಗೆ ಬಾಳ್ವೆಮಾಡದೇ ಇದ್ದರೂ ಪರವಾಗಿಲ್ಲ ಕತ್ತಿನಿಂದ ತಾಳಿ ಕಿತ್ತುಕೊಡಬೇಡ ಎಂದು ಹೇಳಿದರು ಎಂದರೆ ಸರಿಯಲ್ಲ.

2ನೇ ಆರೋಪಿ ನನಗೆ ಹೆಣ್ಣು ಕೊಟ್ಟ ಅತ್ತೆ ಎಂದರೆ ಸರಿ. ಎರಡೂ ಕಡೆಯವರ ಒಪ್ಪಿಗೆಯ ಮೇರೆಗೆ ಮದುವೆಯಾಗಿತ್ತು ಎಂದರೆ ಸರಿ. 2014ರಲ್ಲಿ ಮದುವೆಯಾಗುವ ಕಾಲಕ್ಕೆ 1ನೇ ಆರೋಪಿ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದರುಎಂದರೆ ಸರಿಯಲ್ಲ. ಅವರು ಊರಿನಲ್ಲಿಯೇ ಜಮೀನು ಕೆಲಸ ಮಾಡಿಕೊಂಡಿದ್ದರು. ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದು ನೋಡಿಯೇ ನಾವು ಹೆಣ್ಣು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಮದುವೆಯಾದ ಹೊಸದರಲ್ಲಿ ನಮ್ಮ ಊರಿನ ಸಿದ್ದಯ್ಯರವರ ಮಗ ರವಿ 1ನೇ ಆರೋಪಿಯ ಮನೆಗೆ ಹೋಗಿ ಬರುತ್ತಿದ್ದ ಎಂದರೆ ನನಗೆ ರವಿ ಗೊತ್ತಿಲ್ಲ. ಆಗ ಮನೆಯಲ್ಲಿದ್ದ ವಯಸ್ಸಾದ ಅತ್ತೆ ಮಾವ ಚಾಸಾ-1 ರವರ ಬಳಿ ರವಿ ಯಾಕೆ ಬರುತ್ತಾನೆ ಎಂದು ಪ್ರಶ್ನೆ

ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ರವಿ ನಮ್ಮ ನೆಂಟರ ಹುಡುಗ. ಆದ್ದರಿಂದ ಬರುತ್ತಾರೆ ಎಂದು ಹೇಳಿದರು ಎಂದರೆ ಸರಿಯಲ್ಲ. ಚಾಸಾ-1 ರವರ ಅತ್ತೆ ಮಾವ ಚಾಸಾ-1 ರವರಿಗೆ ಬುದ್ದಿ ಹೇಳಿ ಈ ವಿಷಯವನ್ನು ನನಗೂ ಹೇಳಿದರು ಎಂದರೆ ಸರಿಯಲ್ಲ. ಇದಾದ ನಂತರ ಚಾಸಾ-1 ರವರು ನಮ್ಮ ಮನೆಗೆ ಬಂದು ಸೇರಿಕೊಂಡರು ಎಂದರೆ ಸರಿಯಲ್ಲ. ನಮ್ಮ ಮನೆಗೆ ಬಂದು ಸೇರಿದ 3-4 ವರ್ಷಗಳ ನಂತರ ವೆಂಕಟೇಶ್ ರವರ ಸಮ್ಮುಖದಲ್ಲಿ ಪಂಚಾಯ್ತಿ ಆಯಿತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯಲ್ಲಿ ಶಿನೇ ಆರೋಪಿ ಈಗಾಗಲೇ 3-4 ವರ್ಷಗಳು ಕಳೆದಿದ್ದು,ಚಾಸಾ-1 ರವರನ್ನು ಮನೆಗೆ ಕಳುಹಿಸಿ ಇಲ್ಲದೇ ಇದ್ದರೆ ಬೇರೆ ವ್ಯವಸ್ಥೆ ಮಾಡಿಸಿ ಎಂದು ಹೇಳಿದರು ಎಂದರೆ ಪಂಚಾಯ್ತಿ ನಡೆದಿರುವುದು ಸರಿಯಾಗಿದೆ ಆದರೆ ಮೇಲೆ ಹೇಳಿದ ವಿಚಾರಗಳು ಬಂದಿಲ್ಲ. ಆ ರೀತಿ ಹೇಳಿದ ನಂತರ ಚಾಸಾ-1 ರವರು ನಾನು 1ನೇ ಆರೋಪಿಯೊಂದಿಗೆ ಬರುವುದಿಲ್ಲ ಎಂದು ಹೇಳಿ ತಾಳಿ ಬಿಚ್ಚಿಕೊಡಲು ಹೋದರು ಎಂದರೆ ಸರಿಯಲ್ಲ.

ನಾನು ಮೊದಲಿನಿಂದಲೂ ಕೂಲಿ ಮಾಡುತ್ತೇನೆ. ದಿನಬಂದಕ್ಕೆ ರೂ.600 ಕೂಲಿ ಕೊಡುತ್ತಾರೆ. ಪ್ರತಿದಿನ ಕೂಲಿ ಕೆಲಸ ಇಲ್ಲ ಎಂದರೆ ಇದೆ. ನನ್ನ ದುಡಿಮೆ ಮನೆ ಖರ್ಚು ವೆಚ್ಚಕ್ಕೆ ಆಗುತ್ತದೆ ಎಂದರೆ 1ನೇ ಆರೋಪಿಗೆ ಕೊಟ್ಟ ದುಡ್ಡಿಗೆ ಇಂದಿಗೂ ಬಡ್ಡಿ ಕಟ್ಟುತ್ತಿದೇನೆ ಎಂದು ನುಡಿಯುತ್ತಾರೆ. ರೂ.50 ಸಾವಿರ ಹಣ ನಿಮ್ಮ ಬಳಿ ಇತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಬಡ್ಡಿಗೆ ತಂದಿದ್ದೆ. ಸದರಿ 50 ಸಾವಿರಕ್ಕೆ ಪತ್ರ ಬರೆದುಕೊಟ್ಟಿದ್ದೆ. ಅವರ ಹೆಸರು ಸಿದ್ದು. ಅರ್ಧ ಸಾಲ ಇನ್ನು ಬಾಕಿ ಇದೆ. ಪತ್ರ ಅವರ ಬಳಿ ಇದೆ. ಸದರಿ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಧ್ಯವಾಗುವುದಿಲ್ಲ. ರೂ.50 ಸಾವಿರ ನನ್ನ ಬಳಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ಗ್ರಾಂ ಚೈನ್ ಕೊಟ್ಟಿದ್ದೇನೆ. ಅದನ್ನು ಬೆಂಗಳೂರಿನಲ್ಲಿ ಖರಿದಿಸಿದ್ದೇನೆ. ಯಾವ ಅಂಗಡಿಯಿಂದ ಎಂದರೆ ನೆನಪಿಲ್ಲ. ಸದರಿ ಒಡವೆ ಖರೀದಿಯ ಚೀಟಿಯನ್ನು 1ನೇ ಆರೋಪಿಗೆ ಕೊಟ್ಟಿದ್ದೇನೆ. ಮದುವೆಯ ಸಮಯದಲ್ಲಿ ನಾನು 1ನೇ ಆರೋಪಿಗೆ ರೂ.50 ಸಾವಿರ ನಗದು ಮತ್ತು 10 ಗ್ರಾಂ ಚಿನ್ನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಣ ಮತ್ತು ಚಿನ್ನ ಕೊಟ್ಟಿದ್ದನ್ನು ನೋಡಿದವರು ಯಾರಾದರು ಇದ್ದಾರೆಯೇ ಎಂದರೆ ಇಲ್ಲ.

ಮೈಸೂರು ಠಾಣೆಗೆ ದೂರು ಕೊಟ್ಟು ಎಷ್ಟು ವರ್ಷವಾಯಿತು ಎಂದರೆ ಹೇಳಲು ಗೊತ್ತಾಗುವುದಿಲ್ಲ. ಯಾರ್ಯಾರ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಯಾವ ವಿಚಾರಕ್ಕೆ ದೂರು ಕೊಡುತ್ತಿದೇನೆ ಎಂದು ಚಾಸಾ-1 ಖುದ್ದಾಗಿ ಹೇಳಿದ್ದಾರೆಯೇ ಎಂದರೆ ಅನ್ಯಾಯವಾಗುತ್ತಿದೆ ಅದಕ್ಕೆ ಕೊಡುತ್ತಿರುವುದಾಗಿ ಹೇಳಿದರು. ಏನು ಅನ್ಯಾಯ ಆಗುತ್ತಿದೆ ಎಂದು ಕೇಳಿದ್ದಿರಾ ಎಂದರೆ ಕೇಳಿಲ್ಲ. ನ್ಯಾಯಾಲಯದ ಮುಂದಿರುವ 3ನೇ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇದೆಯೇ ಎಂದರೆ ಮಗಳು ದೂರು ಕೊಟ್ಟಿದ್ದಾಳೆ. ನಾನು ಓದಿಲ್ಲ. ನನ್ನ ಮಗಳು ಮತ್ತು ಆರೋಪಿತರ ಮಧ್ಯೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಚಾಸಾ-1 ರವರಿಗೆ ಸ್ವಂತ ಅಜ್ಜಿಯಾದ ಕಾರಣ ಯಾವುದೇ ತೊಂದರೆ ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಮದುವೆಯಾದ ಹೊಸದರಲ್ಲಿ ಬೇರೆ ಸಂಬಂಧಗಳ ಆಧಾರದ ಮೇಲೆ ನಮ್ಮ ಮನೆ ಸೇರಿಕೊಂಡರು ಎಂದರೆ ಸರಿಯಲ್ಲ. 2024ರಲ್ಲಿ ದುರುದ್ದೇಶದಿಂದ ಅನ್ಯತಾ ಫಾಯಿದೆ ಪಡೆಯಲು ಆರೋಪಿತರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ದೂರು ನೀಡುವ ಮೊದಲು ನಾವು ಆರೋಪಿತರ ಬಳಿ ರೂ.3 ಲಕ್ಷಕ್ಕೆ ಬೇಡಿಕೆ ಇಟ್ಟೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬಿಳಿಕೆರೆ ಠಾಣೆಯಲ್ಲಿ ದೂರು ಕೊಟ್ಟಾಗ ಆರೋಪಿತರೇ ಮುಂದೆ ಬಂದು 5 ಲಕ್ಷ ಕೊಡುವುದಾಗಿ 1ನೇ ಆರೋಪಿ ಹೇಳಿದ್ದರು. ಬಿಳಿಕೆರೆ ಠಾಣೆಯಲ್ಲಿ ಹಣ ಕೊಡುವುದಾಗಿ ಹೇಳಿ ಆರೋಪಿತರು ಬರಲಿಲ್ಲ. ಪೋಲಿಸರು ದೂರು ಕೊಡುವಂತೆ ಹೇಳಿದ್ದರಿಂದ ಮೈಸೂರು ಜಿಲ್ಲಾ ಮಹಿಳಾ ಠಾಣೆಯಲ್ಲಿ ದೂರು ಕೊಟ್ಟೆವು. ರೂ.5 ಲಕ್ಷ ಯಾವ ಕಾರಣಕ್ಕಾಗಿ ಕೊಡುವುದಾಗಿ ಹೇಳಿದರು ಎಂದರೆ ಚಾಸಾ-1 ರವರ ಜೀವನಾಂಶಕ್ಕಾಗಿ ಕೊಡಲು ಒಪ್ಪಿದರು. ಬಿಳಿಕೆರೆ ಠಾಣೆಗೆ ದೂರು ಕೊಟ್ಟ ಬಗ್ಗೆ ದಾಖಲೆ ಇದೆಯೇ ಎಂದರೆ ಇಲ್ಲ. ರೂ.5 ಲಕ್ಷ ಕೊಡುವ, ತೆಗೆದುಕೊಳ್ಳುವ ಮಾತಾಗುವಾಗ 2 ಕಡೆಯ ಗ್ರಾಮಸ್ಥರು ಇದ್ದರು. ಅವರ ಹೆಸರು ಈಗ ಹೇಳಲಾಗುವುದಿಲ್ಲ. ರೂ.5 ಲಕ್ಷ ಕೀಳಲು ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

1ನೇ ಆರೋಪಿಯ ಮನೆಯಲ್ಲಿ ಎಷ್ಟು ಜನ ಸದಸ್ಯರು ಇದ್ದಾರೆ ಎಂದು ಹೇಳಲಾಗುವುದಿಲ್ಲ. ನನ್ನ ಪತ್ನಿ ತೀರಿಹೋದ ನಂತರ ನಾನು ಆರೋಪಿತರ ಮನೆಗೆ ಹೋಗಿಲ್ಲ. ನನ್ನ ಪತ್ನಿ ಮೃತಪಟ್ಟು 7-8 ವರ್ಷವಾಯಿತು. ನನ್ನ ಮಗಳು ನೀಡಿದ ಸುಳ್ಳು

ದೂರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ದೂರು ಕೊಟ್ಟ ದಿನಾಂಕ ಗೊತ್ತಿಲ್ಲ. ಗಲಾಟೆಯಾದ ತಾರೀಖು ಗೊತ್ತಿಲ್ಲ. ಪಂಚಾಯ್ತಿಯಾದ ತಾರೀಖು ಗೊತ್ತಿಲ್ಲ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾರೆಯೇ ಎಂದರೆ ಗೊತ್ತಿಲ್ಲ. ದೂರು ಕೊಟ್ಟ ದಿನ 1ನೇ ಆರೋಪಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದೂರು ಕೊಟ್ಟ ದಿನ ಚಾಸಾ-1 ರವರು 2ನೇ ಆರೋಪಿಗೆ ಹೊಡೆದು ಸಿಮೇ ಎಣ್ಣೆ ಸುರಿದು ಬೆಂಕಿ ಹಚ್ಚಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.